# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 290 | Pages. 2 | Date: 10-10-2025, FRIDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 290 - ಪುಟಗಳು : 2 | 10-10-2025 ಶುಕ್ರವಾರ | Ph: 8762954248 | ದರ : ₹1


# ಜನಸಾಮಾನ್ಯರ ಉತ್ಸವವಾಗಲಿದೆಯೇ ಹಾಸನಾಂಬ ಜಾತ್ರೆ?

## ನುಡಿದಂತೆ ನಡೆದ ಸಚಿವ ಕೃಷ್ಣ ಬೈರೇಗೌಡ | ಹಿಂಬಾಲಕರ ದಂಡಿಲ್ಲದೆ ಬಂದ ಜಿಲ್ಲಾ ಮಂತ್ರಿ | ಸ್ವಕ್ಷೇತ್ರದ ಜನರಿಗೆ ಸ್ವಂತ ಹಣದಲ್ಲಿ ದರ್ಶನದ ಟಿಕೆಟ್ ಖರೀದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಹಾಸನಾಂಬ ದೇವಾಲಯದ ಗರ್ಭಗುಡಿ ಬಾಗಿಲು ತೆರೆಯುವ ಸಂದರ್ಭದಲ್ಲಿ ಹಿಂಬಾಲಕರ ದಂಡಿಲ್ಲದೆ ಆಗಮಿಸಿ ನುಡಿದಂತೆ ನಡೆದಿದ್ದಾರೆ. ಅಲ್ಲದೇ ತಮ್ಮ ಮತ ಕ್ಷೇತ್ರದ ಜನರಿಗೆ ಪಾಸ್ ಬದಲಿಗೆ ತಮ್ಮ ಸ್ವಂತ ಹಣದಿಂದ ದರ್ಶನದ ಟಿಕೆಟ್ ಖರೀದಿಸಿಕೊಟ್ಟಿದ್ದಾರೆ. ಆ ಮೂಲಕ ವಿಐಪಿ ಪಾಸ್ ಪಿಡುಗಿಗೆ ಕೊನೆ ಹಾಡಲು ಮುಂದಾಗಿದ್ದು, ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಈಗ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ರಾಜಕಾರಣಿಗಳ ಮೇಲಿದೆ.

ಗುರುವಾರ ಗರ್ಭಗುಡಿ ಬಾಗಿಲು ತೆರೆಯುವ ಸಮಾರಂಭಕ್ಕೆ ಸಂಸದ ಶ್ರೇಯಸ್ ಪಟೇಲ್ ಹಾಗೂ ಕೆಲವೇ ಕೆಲವು ಕಾಂಗ್ರೆಸ್ ಮುಖಂಡರೊಂದಿಗೆ ಮ್ಯಾಕ್ಸಿ ಕ್ಯಾಬ್‌ನಲ್ಲಿ ಆಗಮಿಸಿದ ಸಚಿವರು, ತಮ್ಮ ಹಿಂದೆ ಯಾರೂ ಬರದಂತೆ




ಕಾಂಗ್ರೆಸ್ ಕಾರ್ಯಕರ್ತರಿಗೆ ಸೂಚನೆ ನೀಡಿದರು. ಹೀಗಾಗಿ ಕೆಲವೇ ಪ್ರಮುಖರು ಮಾತ್ರವೇ ದೇವಾಲಯದ ಒಳಗೆ ಹೋದರು.

ಬಾಗಿಲು ತೆರೆಯುವ ಪೂಜೆ, ಪುನಸ್ಕಾರಗಳು ಜರುಗಿದ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೇರೆ ಯಾವ ವಿಷಯಕ್ಕೂ ಕಾಲಹರಣ ಮಾಡದೇ ಅಲ್ಲಿಂದ ತೆರಳಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ತುರ್ತು ಸಭೆ ನಡೆಸಿ ಖಡಕ್ ಸೂಚನೆಗಳನ್ನು ನೀಡಿ ತೆರಳಿದರು.

### ಸಭೆಯಲ್ಲಿ ಹೇಳಿದ್ದೇನು

ಹಾಸನಾಂಬ ಜಾತ್ರಾ ಮಹೋತ್ಸವ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಚಿವರು ತುರ್ತು ಸಭೆ ನಡೆಸಿದರು. ಅನಾಹುತ ನಡೆಯುವ ಮುನ್ನವೇ ಎಚ್ಚರಿಕೆ ಕ್ರಮ ವಹಿಸಬೇಕು. ಅನಾಹುತ ತಡೆಯುವುದೇ ನಮ್ಮ ಕರ್ತವ್ಯ. ಅಧಿಕಾರಿಗಳು ನಾಯಕತ್ವ ಗುಣದೊಂದಿಗೆ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಭದ್ರತಾ



ಲೋಪವನ್ನು ಯಾವುದೇ ರೀತಿಯಲ್ಲೂ ಸಹಿಸಲಾಗುವುದಿಲ್ಲ. ದೇವಾಲಯಕ್ಕೆ ಪ್ರತಿ ದಿನ ಆಗಮಿಸುವ ಮತ್ತು ನಿರ್ಗಮಿಸುವ ಭಕ್ತರ ಸಂಖ್ಯೆಯ ಮೇಲೆ ನಿಗಾವಹಿಸಬೇಕು. ಟ್ರಾಫಿಕ್ ನಿರ್ವಹಣೆಯಲ್ಲೂ ಅಧಿಕಾರಿಗಳು ವಿಶೇಷ ಎಚ್ಚರಿಕೆ ವಹಿಸಬೇಕು. ದೇವಾಲಯದ ಒಳಗೆ ಎಸ್ಕಾರ್ಟ್ ವಾಹನಗಳಿಗೆ ಅವಕಾಶ ನೀಡಬಾರದು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಹಾಸನಾಂಬ ವಿಶ್ವರೂಪ ದರ್ಶನ

ನಗರದ ಅಧಿದೇವತೆ ಹಾಸನಾಂಬ ಗರ್ಭಗುಡಿ ಬಾಗಿಲು ಮಧ್ಯಾಹ್ನ ಸಂಪ್ರದಾಯ ಬದ್ಧವಾಗಿ ತೆರೆಯಿತು. ನಾಡಿನ ವಿವಿಧ ಮಠಾಧೀಶರು, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಶಾಸಕ, ಸಂಸದ, ಅಧಿಕಾರಿಗಳ ಸಮ್ಮುಖದಲ್ಲಿ ಮಧ್ಯಾಹ್ನ 12.21ಕ್ಕೆ ಹಾಸನಾಂಬ ವಿಶ್ವರೂಪ ದರ್ಶನ ಕರುಣಿಸಿದಳು.

ತಳವಾರ ವಂಶಸ್ಥ ನರಸಿಂಹರಾಜ ಅರಸು ದೇವಾಲಯದ ಮುಂಭಾಗ ನಿಲ್ಲಿಸಿದ್ದ ಬಾಳೆ ಕಂದನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಕತ್ತರಿಸಿದರು. ಗರ್ಭಗುಡಿಯ ಮುಂಭಾಗ ಮಂಗಳವಾದ್ಯ, ಗಂಟೆ ಮೊಳಗಿದರೆ ಹೊರಗೆ ಕೊಂಬು-ಕಹಳೆ ಮತ್ತು ಭಕ್ತರು ಜಯಘೋಷ ಮೊಳಗಿದವು.

ದೇವಿಯ ದರ್ಶನಾವಕಾಶ ಸಿಗುತ್ತಿದ್ದಂತೆಯೇ ನೆರೆದಿದ್ದ ಎಲ್ಲರೂ ಕೈ ಮುಗಿದು ಸರ್ವರಿಗೆ, ನಾಡಿಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

### ಮಠಾಧೀಶರು-ಗಣ್ಯರು ಸಾಕ್ಷಿ

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಕಿರಿಯ ಶಿವ ಸಿದ್ದೇಶ್ವರ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸದಾಶಿವ ಸ್ವಾಮೀಜಿ, ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕೆ.ಆರ್.ನಗರ ಕನಕ ಪೀಠದ ಶಿವಾನಂದಪುರಿ ಸ್ವಾಮೀಜಿ, ಹೊಳೆನರಸೀಪುರ ತೇಜೂರು ಮಠದ ಕಲ್ಯಾಣ ಸ್ವಾಮೀಜಿ, ವಿರಾಜಪೇಟೆಯ ಅರೇಮೇರಿ ಕಳಂಚೇರಿ ಮಠದ ಸದಾಶಿವ ಸ್ವಾಮೀಜಿ, ವಿಜಯಪುರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ಮೇಯರ್ ಗಿರೀಶ್ ಚನ್ನವೀರಪ್ಪ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಪಂ ಸಿಇಒ ಡಾ.ಬಿ.ಆರ್.ಪೂರ್ಣಿಮಾ, ಎಸ್ಪಿ ಮೊಹಮ್ಮದ್ ಸುಜೀತಾ, ಮೈಸೂರು ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ದೇವಾಲಯ ಆಡಳಿತಾಧಿಕಾರಿ ಮಾರುತಿ, ಮಾಜಿ ಎಂಎಲ್‌ಸಿ ಎಂ.ಎ. ಗೋಪಾಲಸ್ವಾಮಿ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಾಗೂರು ಕೃಷ್ಣೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಕಾಂಗ್ರೆಸ್ ಮುಖಂಡ ಬಾಗೂರು ಮಂಜೇಗೌಡ ಮೊದಲಾದವರಿದ್ದರು.



### ನೆರೆದಿದ್ದವರಿಗೆ ದರ್ಶನ

ಇದಕ್ಕೂ ಮುನ್ನ ಮೊನ್ನೆಯಷ್ಟೇ ಜಿಲ್ಲಾ ಖಜಾನೆಯಿಂದ ದೇವಾಲಯದ ಪ್ರಧಾನ ಅರ್ಚಕರ ಮನೆಗೆ ಬೆಳ್ಳಿಪಲ್ಲಕ್ಕಿಯಲ್ಲಿ ತರಲಾಗಿದ್ದ ದೇವಿಯ ಒಡವೆಗಳನ್ನು ಬೆಳಗ್ಗೆ 10.20 ರ ಸುಮಾರಿಗೆ ದೇವಾಲಯಕ್ಕೆ ಗಂಟೆ, ಜಾಗಟೆ, ಮಂಗಳವಾದ್ಯದ ಸಮೇತ ತರಲಾಯಿತು. ಇಂದು ಗರ್ಭಗುಡಿಯ ಸ್ವಚ್ಛತೆ ಇರುವುದರಿಂದ ಸಾರ್ವಜನಿಕ ದರ್ಶನ ಇರಲಿಲ್ಲ. ಆದರೂ ಕೆಲವು ಭಕ್ತರು ಆಗಮಿಸಿದ್ದರಿಂದ ಸ್ಥಳದಲ್ಲಿದ್ದ ಗಣ್ಯರು, ಅಧಿಕಾರಿಗಳು ಮತ್ತು ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಮೂಲ ರೂಪದಲ್ಲಿಯೇ ಎಲ್ಲರೂ ದೇವಿಯನ್ನು ಕಂಡು ಪುನೀತರಾದರು. ಮಧ್ಯಾಹ್ನ ನಂತರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಗರ್ಭಗುಡಿಗೆ ಸುಣ್ಣ ಬಣ್ಣ ಬಳಿದು ಸ್ವಚ್ಛ ಮಾಡಿದ ನಂತರ ಆಭರಣ ಧಾರಣೆ ಮಾಡಲಾಗುತ್ತದೆ.

### ಇಂದಿನ ದರ್ಶನ ಸಮಯ

ಶುಕ್ರವಾರ ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆ ವರೆಗೆ ಮಾತ್ರ ಸಾರ್ವಜನಿಕ



ದರ್ಶನ ಇರಲಿದೆ. ಸಂಜೆ 7ರ ನಂತರ ದೇವಿಗೆ ನೈವೇದ್ಯ ಇತ್ಯಾದಿ ಪೂಜಾ ಕಾರ್ಯ ಹಿನ್ನೆಲೆಯಲ್ಲಿ ದರ್ಶನ ಇರುವುದಿಲ್ಲ.

### ಎಲ್ಲರೂ ಸಹಕರಿಸಲು ಮನವಿ

ಈ ವೇಳೆ ಮಾತನಾಡಿದ ಕೃಷ್ಣ ಬೈರೇಗೌಡ, ನಾಡಿನ ಅತ್ಯಂತ ಶ್ರೇಷ್ಠವಾದ ದೇವತೆ ಹಾಸನಾಂಬೆ ದರ್ಶನ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾಮಹೋತ್ಸ ವ ವಿಧಿವತ್ತಾಗಿ, ಸಂಪ್ರದಾಯ ಬದ್ಧವಾಗಿ ಶಾಸ್ತ್ರೋಕ್ತವಾಗಿ ಹಲವು ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಆರಂಭವಾಗಿದೆ. ಎಲ್ಲವೂ ಸುಗಮವಾಗಿ ನಡೆದಿರುವುದು ಸಂತಸದ ವಿಷಯ. ಇದರಿಂದ ನಾಡಿಗೆ ಒಳ್ಳೆಯದಾಗಲಿದೆ, ಜನರಿಗೆ ಒಳಿತಾಗಲಿದೆ ಎಂಬುದು ನನ್ನ ಸದಾಶಯ ಎಂದರು.

ನಾವೆಲ್ಲರೂ ಸೇರಿ ಇಂದು ಚಾಲನೆ ನೀಡಿದ್ದೇವೆ. ನಾಳೆ ಬೆಳಗ್ಗೆ 6 ರಿಂದ ಸಂಜೆ 7 ಗಂಟೆವರೆಗೆ ಮಾತ್ರ ದರ್ಶನ ಇರಲಿದೆ. ಭಕ್ತರು ಸರದಿ ಸಾಲಿನಲ್ಲಿ ಬಂದು ದೇವಿಯ ದರ್ಶನ ಪಡೆಯಬೇಕು ಎಂದು ಮನವಿ ಮಾಡಿದರು. ಅ. 22ರ ವರೆಗೂ ನೈವೇದ್ಯ, ಮಹಾಮಂಗಳಾರತಿ ಸಮಯ ಹೊರತುಪಡಿಸಿ ಬೆಳಿಗ್ಗೆಯಿಂದ ನಿರಂತರವಾಗಿ ದೇವಿಯ ದರ್ಶನ ವ್ಯವಸ್ಥೆ ಇರಲಿದೆ ಎಂದು ಹೇಳಿದರು.

ಈ ವರ್ಷದ ಮಹೋತ್ಸವಕ್ಕೆ ನಾಡು, ದೇಶದಿಂದ ಲಕ್ಷಾಂತರ ಭಕ್ತರು ದರ್ಶನಕ್ಕಾಗಿ ಆಗಮಿಸುವ ನಿರೀಕ್ಷೆ ಇದೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಉತ್ಸವದ ಕೊನೆಯ ದಿನದವರೆಗೂ ಸಂಜೆ 6 ರಿಂದ ರಾತ್ರಿ 10.30 ವರೆಗೆ, ಹಾಸನಾಂಬೆ ಜಾನಪದ ಗಾಯನ, ನೃತ್ಯ, ಶಾಸ್ತ್ರೀಯ ಸಂಗೀತದ ರಸದೌತಣ ಭಕ್ತರಿಗೆ ಸಿಗಲಿದೆ ಎಂದು ಹೇಳಿದರು.

ಇದರ ಜೊತೆಗೆ ಹೆಲಿ ಟ್ಯೂರಿಸಂ, ಫಲಪುಷ್ಪ ಹಾಗೂ ವಸ್ತು ಪ್ರದರ್ಶನ ಇರಲಿದ್ದು, ದೇವಿಯ ದರ್ಶನ ಜೊತೆಗೆ ವಿಶೇಷ ಮನರಂಜನೆಯನ್ನೂ ಪಡೆಯಬಹುದು. ಹಾಸನ ಭೇಟಿ ಬರುವವರ ನೆನಪಲ್ಲಿ ಉಳಿಯಬೇಕು ಎಂದರು.

# ಚಿತ್ರದುರ್ಗದಲ್ಲಿ ಸಮಾಜವಾದಿ ಪಕ್ಷದ ಕಾರ್ಯಕಾರಿಣಿ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಸಮಾಜವಾದಿ ಪಕ್ಷದ ವಿಶೇಷ ಕಾರ್ಯಕಾರಿಣಿ ಸಭೆ ಅ. 11 ರಿಂದ ಎರಡು ದಿನಗಳ ಕಾಲ ಚಿತ್ರದುರ್ಗದಲ್ಲಿ ನಡೆಯಲಿದೆ ಎಂದು ಸಮಾಜವಾದಿ ಯುವ ಜನ ಸಭಾ ರಾಜ್ಯಾಧ್ಯಕ್ಷ ಸಿ. ಆನಂದ್ ತಿರುಮಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ, ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ರಾಜ್ಯ ಪ್ರವಾಸ ಕೈಗೊಂಡಿದ್ದಾರೆ. ಹಿಂದುಳಿದವರು,



ದಲಿತರು, ಅಲ್ಪಸಂಖ್ಯಾತ (ಪಿಡಿಎ) ಕಡು ಬಡವರು ನಿರ್ಗತಿಕರನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸುತ್ತಿರುವುದು ಖಂಡನಿಯ. ಸರ್ಕಾರದ ಧೋರಣೆ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರಿಗೆ ವಿಶೇಷ ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಸಮಾಜವಾದಿ ಪಕ್ಷವು ಮಾನವೀಯತೆ, ಜಾತ್ಯತೀತ, ಸಮಾನತೆ, ಪ್ರಜಾಪ್ರಭುತ್ವದ ಮೇಲೆ ನಿಂತಿದೆ. ಜಾತಿ, ವರ್ಗ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವುದು ಪಕ್ಷದ ಉದ್ದೇಶ. ಸಮಾಜವಾದಿ ಯುವ ಜನಸಭಾ ಸಂಘಟನೆ ಮತ್ತು ಪಕ್ಷದ ಮುಖಂಡರ ಮೂಲಕ ಮುಂಬರುವ ಚುನಾವಣೆಗಳಲ್ಲಿ ಗೆಲುವು ಸಾಧಿಸುವ ಗುರಿ ಪಕ್ಷದ್ದಾಗಿದೆ. ಈ ನಿಟ್ಟಿನಲ್ಲಿ ಅಖಿಲೇಶ್ ಯಾದವ್ ಅವರ ಭೇಟಿ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತ (ಪಿಡಿಎ) ಕಡುಬಡವರು, ನಿರ್ಗತಿಕರು ಮತ್ತು ಜಾತಿ, ವರ್ಗ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವುದು ಸಮಾಜವಾದಿ ಪಕ್ಷದ ಉದ್ದೇಶವಾಗಿದೆ. ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ರಾಜ್ಯದಲ್ಲಿ ನಾಯಕರನ್ನು ಭೇಟಿ ಮಾಡುತ್ತಿರುವುದು ಮಹತ್ವದ್ದಾಗಿದೆ ಎಂದರು.

# ದೇಶದ ಮೂರನೇ ಅತಿದೊಡ್ಡ ಪಕ್ಷ ಬಿಎಸ್‌ಪಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಸಾಮಾಜಿಕ ಸಂಘಟನೆಯಲ್ಲ, ದೇಶದ ಅಧಿಕಾರ ಹಿಡಿಯಲು ಹೊರಟಿರುವ ದೇಶದ ಮೂರನೇ ಅತಿ ದೊಡ್ಡ ರಾಜಕೀಯ ಪಕ್ಷ ಎಂದು ರಾಜ್ಯ ಬಿಎಸ್‌ಪಿ ಅಧ್ಯಕ್ಷ ಎಂ. ಕೃಷ್ಣಮೂರ್ತಿ ತಿಳಿಸಿದರು.

ಬಹುಜನ ಸಮಾಜ ಪಕ್ಷದ ಸ್ಥಾಪಕ ಕಾನ್ಸಿರಾಂ ಪರಿನಿಬ್ಬಾಣ ದಿನದ ಪ್ರಯುಕ್ತ ಪಟ್ಟಣದಲ್ಲಿ ಗುರುವಾರ ಆಯೋಜಿಸಿದ್ದ ಬಹುಜನರ ಸಂಕಲ್ಪ ದಿನ ಮೈಸೂರು ವಲಯ ಮಟ್ಟದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಬೆರಳೆಣಿಕೆಯಷ್ಟು ಮಂದಿ ಇರುವವರು ಆಳುವ ವರ್ಗವಾಗಿದ್ದು ಬಹುಸಂಖ್ಯಾತ ಸಮಾಜವನ್ನು ಅಧಿಕಾರದಿಂದ ಹೊರಗಿಡಲಾಗಿದ್ದು ಇದು ಮನುವಾದಿಗಳ ತಂತ್ರವಾಗಿದೆ. ಬಹುಜನರು ಅಧಿಕಾರಕ್ಕೆ ಬರಬೇಕು ಎಂಬುದು ಕಾನ್ಸಿರಾಂ ಅವರ ಬಹುಮುಖ್ಯ ಉದ್ದೇಶವಾಗಿದ್ದು ಇದಕ್ಕಾಗಿ ತಮ್ಮ




ಬದುಕನ್ನೇ ತ್ಯಾಗ ಮಾಡಿದ ಧೀಮಂತ ನಾಯಕರಾಗಿದ್ದರು ಎಂದರು.

ನಮ್ಮ ಪೂರ್ವಿಕರಾದ ಬುದ್ಧ, ಬಸವ, ಅಂಬೇಡ್ಕರ್, ಜ್ಯೋತಿ ಬಾಪುಲೆ ಮುಂತಾದವರು ಬಹುಜನರ ಬದುಕಿನ ಕುರಿತು ಕನಸು ಕಂಡಿದ್ದ ಸರ್ವರಿಗೂ ಸಮಬಾಳು, ಸಮಪಾಲು ಎಂಬ ಧ್ಯೇಯ ವಾಕ್ಯವನ್ನು ನನಸು ಮಾಡುವುದೇ ನನ್ನ ಉದ್ದೇಶ ಎಂಬ ಗುರಿಯೊಂದಿಗೆ ಮುನ್ನಡೆದ ಕಾನ್ಸಿರಾಂ ಅವರ ಚಿಂತನೆಯ ಫಲವಾಗಿ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಅಧಿಕಾರ ಹಿಡಿಯಲು ಸಾಧ್ಯವಾಯಿತು. ಮಂಡಲ್ ವರದಿ ಜಾರಿಗೆ ಅವರು ನಡೆಸಿದ ಹೋರಾಟದಿಂದ ಹಿಂದುಳಿದ ವರ್ಗಗಳು ಇಂದು ಶೇ. 27 ರಷ್ಟು ಮೀಸಲಾತಿ ಪಡೆಯಲು ಸಾಧ್ಯವಾಗಿದೆ. ಬಿಎಸ್‌ಪಿಯನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸಿ ಅಪಪ್ರಚಾರ ನಡೆಸಲಾಗುತ್ತಿದೆ. ಬಹುಜನರು ಅಧಿಕಾರ ಪಡೆಯಬೇಕಾದರೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನಂತಹ ಮನುವಾದಿ ಪಕ್ಷಗಳ ತಂತ್ರಗಳಿಗೆ ಮರುಳಾಗಿ ಮತವನ್ನು ಮಾರಿಕೊಳ್ಳದೆ ಪ್ರತಿಯೊಬ್ಬರೂ ಜಾಗೃತರಾಗಬೇಕು ಎಂದರು.

ರಾಜ್ಯ ಬಿಎಸ್‌ಪಿ ಕಾರ್ಯದರ್ಶಿ ಅತ್ನಿ ಹರೀಶ್ ಮಾತನಾಡಿ, ಕಾರ್ಯಕ್ರಮದ ಪ್ರಯುಕ್ತ ತಾವು ಗ್ರಾಮಗಳಿಗೆ ಭೇಟಿ ನೀಡಿದಾಗ ಬಹಳಷ್ಟು ಜನರಿಗೆ ಕಾನ್ಸಿರಾಂ ಕುರಿತು ಅರಿವಿಲ್ಲದಿರುವುದು ಕಂಡುಬಂತು. ಅಂಬೇಡ್ಕರ್ ಬಳಿಕ ಬಹುಜನರ ಸಂಕಷ್ಟ, ನೋವುಗಳನ್ನು ಅರ್ಥಮಾಡಿಕೊಂಡು ಹೋರಾಟ ನಡೆಸಿದ ಮಹಾನ್ ನಾಯಕರಾಗಿದ್ದಾರೆ. ಪೂರ್ವಿಕರ ಇತಿಹಾಸವನ್ನು ತಿರುಚಿ ಮುಚ್ಚಿಹಾಕಲಾಗುತ್ತಿದೆ. ಮುಂದಿನ ದಿನಗಳಲ್ಲಿ ತಾವು ಪ್ರತಿ ಗ್ರಾಮಕ್ಕೆ ಭೇಟಿ ನೀಡಿ ಎಲ್ಲ ಜಾತಿ, ಸಮುದಾಯಗಳ ಜನರ ನೋವಿಗೆ ಸ್ಪಂದಿಸುವ ಸಂಕಲ್ಪ ಕೈಗೊಳ್ಳುವುದಾಗಿ ಹೇಳಿದರು. ರಾಜ್ಯ ಸಂಯೋಜಕ ಗಂಗಾಧರ್ ಬಹುಜನ್ ಮಾತನಾಡಿದರು. ಮುಖಂಡರಾದ ಲಕ್ಷ್ಮಣ ಕೀರ್ತಿ, ಜಾಕೀರ್ ಹುಸೇನ್, ಕೆ.ಟಿ.ರಾಧಾಕೃಷ್ಣ, ಕಾಂತಪ್ಪ ಅಲಂಗಾರ್, ಜಾಕೀರ್ ಅಲಿಖಾನ್, ಕೆ.ಟಿ.ಸುಧಾ, ವೇಲಾಯುಧನ್, ಬಿ.ಆರ್. ಪುಟ್ಟಸ್ವಾಮಿ, ನಾಗಯ್ಯ, ಭರತ್ ಕುಮಾರ್ ಗೌಡ, ಎಂ.ಹೆಚ್.ವೆಂಕಟೇಶ್, ಶಂಕರ್ ಇತರರಿದ್ದರು.

# ಬಾಗೂರು ಸಂಘಕ್ಕೆ ಅಣ್ಣೇಗೌಡ ಅಧ್ಯಕ್ಷ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಬಾಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಅಣ್ಣೇಗೌಡ ಅವಿರೋಧವಾಗಿ ಗುರುವಾರ ಆಯ್ಕೆಗೊಂಡಿದ್ದಾರೆ.


ಡಿ.ಎನ್. ಕೆಂಪೇಗೌಡ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಅಣ್ಣೇಗೌಡ ಹೊರತುಪಡಿಸಿ ಮತ್ಯಾರೂ ನಾಮಪತ್ರ ಸಲ್ಲಿಸದ ಕಾರಣ ಅಣ್ಣೇಗೌಡ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹರೀಶ್ ಘೋಷಿಸಿದರು.

ನೂತನ ಅಧ್ಯಕ್ಷ ಅಣ್ಣೇಗೌಡ ಮಾತನಾಡಿ, ತಮ್ಮ ಅಧಿಕಾರ ಅವಧಿಯ ಮೊದಲ ಆದ್ಯತೆಯಾಗಿ ಗ್ರಾಮ ಸ್ವಚ್ಛತೆ, ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ಅಭಿವೃದ್ಧಿ, ಚರಂಡಿ ಸ್ವಚ್ಛತೆ ಹಾಗೂ ವಿದ್ಯುತ್ ದೀಪಗಳ ನಿರ್ವಹಣೆ ಸೇರಿ ಹೆಚ್ಚಿನ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ನೂತನ ಅಧ್ಯಕ್ಷರನ್ನು ಗ್ರಾಪಂ ಎಲ್ಲಾ ಸದಸ್ಯರು, ಮುಖಂಡರು ಅಭಿನಂದಿಸಿದರು. ಗ್ರಾಪಂ ಉಪಾಧ್ಯಕ್ಷೆ ವರಲಕ್ಷ್ಮಿ ಕಾಂತರಾಜ್, ಸದಸ್ಯರಾದ ಅನುಸೂಯ ಚಂದ್ರೇಗೌಡ, ರೂಪ ರಘು, ಸಾಕಮ್ಮ ಬಸವಲಿಂಗ, ಲಕ್ಷ್ಮಣ್, ವೆಂಕಟೇಶ್, ಪೂರ್ಣಿಮಾ, ರಂಗಸ್ವಾಮಿ, ಸುಮಿತ್ರ, ರೇಣುಕಾ, ಶಂಕರ್, ಪಿಡಿಓ ಎಸ್.ಜೆ. ರಮೇಶ್ ಹಾಗೂ ಇತರರು ಹಾಜರಿದ್ದರು.

# ಚ.ರಾ.ಪ. ತಾಲ್ಲೂಕಿನ ವಿವಿಧೆಡೆ ವ್ಯಾಪಕ ಮಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಧೆಡೆ ಬುಧವಾರ ರಾತ್ರಿ ಹದವಾದ ಮಳೆಯಾಗಿದ್ದು, ಹಿರೀಸಾವೆ ಹೋಬಳಿ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ಮಳೆ ಸುರಿದಿದೆ. ಹಿರೀಸಾವೆ ಗ್ರಾಮದಲ್ಲಿ ಚರಂಡಿ ತುಂಬಾ ಮಣ್ಣು ಮುಚ್ಚಿದ್ದರಿಂದ ಮನೆಯೊಂದಕ್ಕೆ ನೀರು ನುಗ್ಗಿರುವ ಘಟನೆ ನಡೆದಿದೆ. ಬುಧವಾರ ರಾತ್ರಿ 9 ರಿಂದ 11.30ರ ವರೆಗೆ ಜೋರು ಮಳೆ ಸುರಿಯಿತು. ತೋಟ, ಹೊಲಗಳಲ್ಲಿ ನೀರು ನಿಂತಿದೆ. ಹಿರೀಸಾವೆ ಗ್ರಾಮದ ಒಳಗೆ ಹಾದು ಹೋಗಿರುವ ರಾಜ್ಯ ಹೆದ್ದಾರಿ 8ಕ್ಕೆ ಹೊಸದಾಗಿ ಸೇತುವೆ ನಿರ್ಮಾಣ ಮಾಡಿರುವ ಸ್ಥಳದಲ್ಲಿ ಮಳೆ ನೀರು ರಾಜಕಾಲುವೆಗೆ ಹರಿಯದೆ ರಸ್ತೆಯಲ್ಲಿ ಹರಿದಿದೆ.

ಕಾಮಗಾರಿ ನಡೆಯುವಾಗ ಡಿಸಿಸಿ ಬ್ಯಾಂಕ್ ಪಕ್ಕದಲ್ಲಿರುವ ನಂದನ್ ಎಂಬುವವರ ಮನೆಯ ಮುಂಭಾಗದ ಚರಂಡಿಯನ್ನು ಮಣ್ಣಿನಿಂದ ಮುಚ್ಚಿದ್ದರಿಂದ, ರಾತ್ರಿ ಬಿದ್ದ ಮಳೆ ನೀರು ಚರಂಡಿ ತುಂಬಿ ಮನೆಯ ಒಳಕ್ಕೆ ಮತ್ತು ಅಂಗಡಿಗಳಿಗೆ ನೀರು ನುಗ್ಗಿದೆ. ಇದರಿಂದ ಮನೆಯಲ್ಲಿ ಮತ್ತು ಅಂಗಡಿಗಳಲ್ಲಿ ಇದ್ದ ವಸ್ತುಗಳು ನೀರಿನಲ್ಲಿ ನೆನೆದಿವೆ. ರಾತ್ರಿಯೆಲ್ಲಾ ಮನೆಯವರು ನೀರನ್ನು ಹೊರಹಾಕಿದ್ದಾರೆ. ಹಿರೀಸಾವೆ ಹೋಬಳಿಯಲ್ಲಿ ಹಲವು ದಿನಗಳಿಂದ ಮಳೆ ಇಲ್ಲದೆ ರಾಗಿ, ಜೋಳ ಹಾಗೂ ತೆಂಗು ಸೇರಿದಂತೆ ಹಲವು ಬೆಳೆಗಳು ಒಣಗಿದ್ದವು. ಸದ್ಯ ಸುರಿದ ಹದ ಮಳೆಯಿಂದ ಬೆಳೆಗಳು ಚೇತರಿಸಿಕೊಳ್ಳಲು ಎಂದು ರೈತರು ತಿಳಿಸಿದ್ದಾರೆ.

# ಕೂಲಿ ಕಾರ್ಮಿಕನ ಶವ ಪತ್ತೆ: ಸ್ನೇಹಿತನಿಂದಲೇ ಕೊಲೆ ಶಂಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಗೋಪಾಲಪುರ ಸಮೀಪದ ತಾರಿಕ್ ಬೈಲು ಗ್ರಾಮದ ಲೈನ್ ಮನೆಯಲ್ಲಿ ಕಾಫಿ ತೋಟದ ಕಾರ್ಮಿಕನ ಮೃತದೇಹ ಪತ್ತೆಯಾಗಿದ್ದು ಸ್ನೇಹಿತನೇ ಕೊಲೆಗೈದಿರುವ ಶಂಕೆ ವ್ಯಕ್ತವಾಗಿದೆ.

ಬೆಳಗೋಡು ಹೋಬಳಿ ಜಮ್ಮನಹಳ್ಳಿ ಗ್ರಾಮದ ಸತೀಶ್ (35) ಮೃತರು. ಸತೀಶ್ ತನ್ನ ಸ್ನೇಹಿತ ಕೃಷ್ಣ ಎಂಬುವನ ಜೊತೆ ಸಹದೇವ್ ಶೆಟ್ಟಿ ಎಂಬುವವರ



ಕಾಫಿ ತೋಟಕ್ಕೆ ಕೂಲಿ ಕೆಲಸಕ್ಕೆ ತೆರಳಿದ್ದರು. ಇಬ್ಬರೂ ತೋಟದ ಕಾರ್ಮಿಕರ ವಸತಿ ಗೃಹದಲ್ಲಿರುತ್ತಿದ್ದರು. ಸೋಮವಾರ ಸ್ವಗ್ರಾಮ ಜಮ್ಮನಹಳ್ಳಿಯಿಂದ ಕೆಲಸಕ್ಕೆ ತೆರಳಿದ್ದ. ಗುರುವಾರ ಮಧ್ಯಾಹ್ನ ಸತೀಶ್ ಮೃತಪಟ್ಟಿರುವ ವಿಚಾರ ಪಕ್ಕದ ನಿವಾಸಿಗಳಿಂದ ಪೊಲೀಸರಿಗೆ ತಿಳಿದಿದೆ. ಯಸಳೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಯಾವಾಗಲೂ ಸತೀಶ್ ಜೊತೆಗೆ ಇರುತ್ತಿದ್ದ ಕೃಷ್ಣ ಬುಧವಾರ ಸಂಜೆಯಿಂದ ನಾಪತ್ತೆಯಾಗಿದ್ದಾನೆ. ಹೀಗಾಗಿ ಆತನೇ ಕೊಲೆ ಮಾಡಿರುವ ಅನುಮಾನ ವ್ಯಕ್ತವಾಗಿದೆ. ಬುಧವಾರ ಸಂಜೆ ಇಬ್ಬರು ಪಾನಮತ್ತರಾಗಿ ಹೊಡೆದಾಡಿಕೊಂಡಿದ್ದರು. ಕುಡಿದ ಅಮಲಿನಲ್ಲಿ ಕೃಷ್ಣ ದೊಣ್ಣೆಯಿಂದ ಸತೀಶ್‌ನ ತಲೆಗೆ ಹೊಡೆದಿರಬಹುದೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅದಕ್ಕೆ ಸಾಕ್ಷಿ ಎಂಬಂತೆ ಕೊಲೆಯಾಗಿರುವ ಸತೀಶ್‌ನ ಮೃತದೇಹದ ಪಕ್ಕದಲ್ಲಿ ಮರದ ದೊಣ್ಣೆ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಹಿಮ್ಸ್‌ಗೆ ರವಾನಿಸಲಾಗಿದೆ. ಕೃಷ್ಣನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪಟಾಕಿ ಮಾರಾಟ: ಸುರಕ್ಷತಾ ಕ್ರಮಕ್ಕೆ ಡಿಸಿ ಸೂಚನೆ

## ಪರವಾನಗಿ ಪಡೆಯುವುದು ಕಡ್ಡಾಯ | ತಪ್ಪಿದರೆ ಕ್ರಮದ ಎಚ್ಚರಿಕೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ:ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಪಟಾಕಿ ಮಾರಾಟ ಮಾಡಲು ತಾತ್ಕಾಲಿಕ ಪರವಾನಗಿ ಪಡೆದು ಮಾರಾಟ ಮಾಡುವ ಸಂದರ್ಭದಲ್ಲಿ ಅಗತ್ಯ ಸುರಕ್ಷತಾ ಕ್ರಮ ಅನುಸರಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪಟಾಕಿ ಮಾರಾಟ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ರಚಿಸಿ ಅವರ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಣೆಗೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅ.19 ರಿಂದ 22ರ ವರೆಗೆ ಬೆಳಿಗ್ಗೆ 9.30 ರಿಂದ ಸಂಜೆ 7.30ರ ವರೆಗೆ ಮಾತ್ರ ಮಾರಾಟ ಮಾಡಬೇಕು. ಎಸ್.ಎಂ. ಕೃಷ್ಣ ನಗರದ ಸಿ.ಐ.ಟಿ.ಬಿ. ವ್ಯಾಪ್ತಿಯಲ್ಲಿರುವ ಖಾಲಿ ಪ್ರದೇಶದ ನಿಗದಿತ ಸ್ಥಳದಲ್ಲಿ ಮಾರಾಟ ಮಾಡಬೇಕು. ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಬೇಕು. ಸ್ವಚ್ಛತೆಗೆ ಕ್ರಮ ವಹಿಸಬೇಕು ಹಾಗೂ ಪ್ರವೇಶ ಮತ್ತು ನಿರ್ಗಮನ ದ್ವಾರದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಎಂದು ತಿಳಿಸಿದರು.

ಪರವಾನಗಿ ಪಡೆಯದೆ ಕಾನೂನು ಬಾಹಿರವಾಗಿ ಪಟಾಕಿ ಮಾರಾಟ ಮಾಡುವುದು ಕಂಡುಬಂದಲ್ಲಿ ತಕ್ಷಣ ಪ್ರಕರಣ ದಾಖಲಿಸಿ ಉಲ್ಲಂಘನೆ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪಟಾಕಿ ಮಾರಾಟ ಮಾಡಲು ತಾತ್ಕಾಲಿಕ ಪರವಾನಗಿ ಪಡೆಯುವವರು ಎ.ಬಿ.ಸಿ. ಪೌಡರ್ ನಿರ್ವಹಣೆ ಬಗ್ಗೆ ಅಂಗಡಿ ಮಳಿಗೆ ತೆರೆಯುವ ಮುಂಚೆ ಕಡ್ಡಾಯವಾಗಿ ಅಗ್ನಿಶಾಮಕ ಇಲಾಖೆಯಿಂದ ತರಬೇತಿ ಪಡೆಯುವಂತೆ ತಿಳಿಸಿದರು.

ತಾತ್ಕಾಲಿಕ ಪಟಾಕಿ ಮಾರಾಟ ಪರವಾನಗಿಯು ಕೇವಲ ಪರವಾನಗಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಸದರಿ ಪರವಾನಗಿಯು ಕೇವಲ ಪಟಾಕಿ ಮಾರಾಟ ಮಾಡುವ ಸಲುವಾಗಿ ನೀಡಲಿದ್ದು, ಯಾವುದೇ ರೀತಿಯ ಪಟಾಕಿಗಳನ್ನು ತಯಾರಿಸುವಂತಿಲ್ಲ ಮತ್ತು ಅವಧಿ ನಂತರ ಮಾರಾಟ ಮತ್ತು ಶೇಖರಣೆ ಮಾಡಬಾರದು ಎಂದು ತಿಳಿಸಿದರು.

ತಾತ್ಕಾಲಿಕ ಪಟಾಕಿ ಮಳಿಗೆಗಳನ್ನು ವೈಜ್ಞಾನಿಕವಾಗಿ ಮಾರ್ಗಸೂಚಿಗಳನ್ವಯ ನಿರ್ಮಾಣ ಮಾಡಬೇಕು. ಎರಡು ಕಡೆಗಳಲ್ಲಿ ಸರಾಗವಾಗಿ ಗಾಳಿಯಾಡುವಂತಿರಬೇಕು. ಪ್ರತಿ ಅಂಗಡಿಗಳ ಮಧ್ಯೆ ಕನಿಷ್ಠ 3 ಮೀಟರ್ ಅಂತರವಿರಬೇಕು. ಸುಸಜ್ಜಿತ ವಿದ್ಯುತ್ ಸಂಪರ್ಕವಿರಬೇಕು. ಅಂಗಡಿ ಮುಂಭಾಗ ಮತ್ತು ಹಿಂಭಾಗದಲ್ಲಿ ಪ್ರವೇಶ ವ್ಯವಸ್ಥೆ ಇರಬೇಕು ಎಂದು ತಿಳಿಸಿದರು.

ತಾತ್ಕಾಲಿಕ ಪ್ರತಿ ಅಂಗಡಿ ಮಳಿಗೆಗಳಲ್ಲಿ ಬೆಂಕಿಯನ್ನು ತಡೆಗಟ್ಟಬಹುದಾದ ಸಾಧನಗಳನ್ನು ಕಡ್ಡಾಯವಾಗಿ ಉಪಯೋಗಿಸಬೇಕು. 9 ಲೀಟರ್ ಸಾಮರ್ಥ್ಯದ ವಾಟರ್ ಪ್ರೇಜರ್ ಮಾದರಿ ಅಗ್ನಿನಂದಕ ಹಾಗೂ ಎರಡು ಬಕೆಟ್‌ಗಳಲ್ಲಿ ನೀರನ್ನು ಮತ್ತು ಮರಳನ್ನು ಇಟ್ಟಿರಬೇಕು ಜೊತೆಗೆ ಪ್ರತಿ ಮಳಿಗೆ ಪಕ್ಕದಲ್ಲಿ 2 ಡ್ರಂಗಳಲ್ಲಿ ಕನಿಷ್ಟ 400 ಲೀಟರ್ ನೀರನ್ನು ಕಡ್ಡಾಯವಾಗಿ ಶೇಖರಿಸಿಟ್ಟಿರಬೇಕು ಎಂದು ತಿಳಿಸಿದರು.

ಮಳಿಗೆಗಳಲ್ಲಿ ಮತ್ತು ಮಳಿಗೆಗಳ 50 ಮೀಟರ್ ದೂರದವರೆಗೆ ಧೂಮಪಾನ ಅಥವಾ ಕುಕ್ಕಿಂಗ್ ವ್ಯವಸ್ಥೆ ನಿಷೇಧ ಮಾಡಿದೆ. ಪಟಾಕಿ ಮಾರಾಟ ಮಳಿಗೆಗಳಲ್ಲಿ ರಾತ್ರಿ ಯಾರು ಮಲಗಬಾರದು ಹಾಗೂ ಅಪ್ರಾಪ್ತ ವಯಸ್ಸಿನ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ ಎಂದು ಸೂಚಿಸಿದರು.

ಪರಿಸರ ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಮಳಿಗೆಗಳಿಗೆ ಭೇಟಿ ನೀಡಿ ಪಟಾಕಿ ಮಾರಾಟ ಮಳಿಗೆಗಳಲ್ಲಿ ಹೆಚ್ಚಿನ ಶಬ್ದ ಬರುವ ಪಟಾಕಿಗಳನ್ನು ಮಾರಾಟ ಮಾಡುವುದರ ಬಗ್ಗೆ ಪರಿಶೀಲನೆ ಮಾಡುವಂತೆ ಸೂಚಿಸಿದರು.

ಸಾರ್ವಜನಿಕರು ಏನು ಮಾಡಬೇಕು ಏನು ಮಾಡಬಾರದು ಎಂಬುದರ ಬಗ್ಗೆ ಪ್ರತಿ ಮಳಿಗೆಯಲ್ಲಿ ಬ್ಯಾನರ್ ಅಳವಡಿಸಬೇಕು. ಸಾರ್ವಜನಿಕರು ರಾತ್ರಿ 10 ಗಂಟೆ ನಂತರ ಪಟಾಕಿಯನ್ನು ಸಿಡಿಸಬಾರದು ಹಾಗೂ ಪಟಾಕಿ ಸಿಡಿಸಿದ ನಂತರ ತ್ಯಾಜ್ಯ ವಸ್ತುಗಳನ್ನು ಸ್ವಚ್ಛಗೊಳಿಸಿ ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಂಜುನಾಥ್, ತಹಸೀಲ್ದಾರ್ ಗೀತಾ, ಅಗ್ನಿ ಶಾಮಕ ದಳದ ಅಧಿಕಾರಿ ಹಾಗೂ ಪಟಾಕಿ ಮಾರಾಟಗಾರರ ಸಂಘದ ಅಧ್ಯಕ್ಷರು ಹಾಗೂ ಮಾರಾಟಗಾರರು ಸಭೆಯಲ್ಲಿ ಹಾಜರಿದ್ದರು.

## ವಸ್ತ್ರ ಸಂಹಿತೆ ಜಾರಿಗೆ ಕ್ರಮ ವಹಿಸಿ: ದೇವರಾಜೇಗೌಡ ಆಗ್ರಹ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನಾಂಬ ದರ್ಶನೋತ್ಸವ ನಿಮಿತ್ತ ದೇವಾಲಯದ ಒಳಗೆ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗೆ ವಸ್ತ್ರ ಸಂಹಿತೆ ಜಾರಿಗೊಳಿಸಲಾಗಿದೆಯಾದರೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಸಿಬ್ಬಂದಿಗೆ ಆ ಬಗ್ಗೆ ಸೂಚನೆ ನೀಡಿಲ್ಲ ಎಂದು ಬಿಜೆಪಿ ಮುಖಂಡ ದೇವರಾಜೇಗೌಡ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೆ. 30ರಂದು ಹಿಂದು ಧಾರ್ಮಿಕ ದತ್ತಿ ಇಲಾಖೆಯಿಂದ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಿ ಆದೇಶ ಪ್ರಕಟವಾಗಿದ್ದರೂ ಪೊಲೀಸ್ ವರಿಷ್ಠಾಧಿಕಾರಿ ಗಂಭೀರವಾಗಿ ಪರಿಗಣಿಸಿಲ್ಲ. ವಸ್ತ್ರ ಸಂಹಿತೆ ಜಾರಿಗೊಳಿಸದಿದ್ದರೆ ಪೊಲೀಸ್ ಇಲಾಖೆಗೆ ಕಳಂಕ ಎಂದರು. ಹಾಸನಾಂಬ ಜಾತ್ರಾ ಮಹೋತ್ಸವ ಯಶಸ್ವಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಉತ್ತಮ ಯೋಜನೆ ರೂಪಿಸಿದ್ದಾರೆ. ಗಣ್ಯರು, ಅತಿ ಗಣ್ಯರ ಪ್ರವೇಶಕ್ಕೆ ಸಮಯ ನಿಗದಿ, ಒಬ್ಬ ಅತಿಥಿ ಜೊತೆಗೆ ನಾಲ್ವರಿಗಷ್ಟೇ ಪ್ರವೇಶ, ಶಿಷ್ಟಾಚಾರ ಪಾಲನೆ ಉದ್ದೇಶದಿಂದ ಸರ್ಕಾರಿ ವಾಹನದಲ್ಲೇ ದೇವಸ್ಥಾನಕ್ಕೆ ಕರೆದೊಯ್ಯುವ ನಿರ್ಧಾರದಿಂದ ಅನಗತ್ಯ ಗೊಂದಲಕ್ಕೆ ಕಡಿವಾಣ ಹಾಕಬಹುದು. ಈ ನಿರ್ಧಾರ ಕೈಗೊಂಡಿರುವುದಕ್ಕಾಗಿ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ದೇವಿ ಜಾತ್ರೆಯಲ್ಲಿ ಗೊಂದಲ ಉಂಟಾಗಬಾರದೆಂಬ ಕಾರಣಕ್ಕೆ ಹಾಕಿಕೊಂಡಿರುವ ನಿಯಮಗಳು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕೆಂದರೆ ಜಿಲ್ಲೆಯ ಜನಪ್ರತಿನಿಧಿಗಳು ಸಹಕಾರ ನೀಡಬೇಕು. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಚುನಾವಣೆ ಗೆಲ್ಲುವ ರಾಜಕಾರಣಿಗಳು ತಮ್ಮ ಬೆಂಬಲಿಗರಿಗೆ ಸಾವಿರ ರೂ. ಟಿಕೆಟ್ ಖರೀದಿಸಿ ಕೊಡುವ ಔದಾರ್ಯ ಮೆರೆಯಬೇಕು. ಸರದಿ ಸಾಲಿನಲ್ಲಿ ನಿಂತು ದೇವಿ ದರ್ಶನಕ್ಕೆ ಹೋಗಲು ಸಾಧ್ಯವಾಗದಂತವರು ಆರ್ಥಿಕವಾಗಿ ಸಬಲರಾಗದೆ ಇದ್ದವರು ನನ್ನನ್ನು ಸಂಪರ್ಕಿಸಿದರೆ ಶಕ್ತ್ಯಾನುಸಾರ ಟಿಕೆಟ್ ಖರೀದಿಸಿ ಕೊಡುತ್ತೇನೆಂದು ಭರವಸೆ ನೀಡಿದರು. ಮುಖಂಡರಾದ ಶಂಕರ್, ತಿಲಕ್, ನಾಗರಾಜ್ ಇದ್ದರು.

## ಸಿಜೆಐ ಗವಾಯಿಗೆ ಅವಮಾನ ಖಂಡಿಸಿ ಪ್ರತಿಭಟನೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರಿಗೆ ವಕೀಲನೊಬ್ಬ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ಗುರುವಾರ ಪಟ್ಟಣದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ನಿವೃತ್ತ ಶಿಕ್ಷಕ ಹೆಚ್.ಪಿ. ಲಕ್ಕಪ್ಪ ಮಾತನಾಡಿ, ಮುಖ್ಯ ನ್ಯಾಯಮೂರ್ತಿಯವರಿಗೂ ನ್ಯಾಯಾಂಗಕ್ಕೂ ಅವಮಾನ ಮಾಡಿದ ಜಾತಿವಾದಿ ವಕೀಲನನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ದಲಿತ ಸಮುದಾಯಕ್ಕೆ ಸೇರಿದ ಬಿ.ಆರ್. ಗವಾಯಿ ಅವರು ಸಾಮಾಜಿಕ ಅಸಮಾನತೆಯನ್ನು ಎದುರಿಸಿ ತಮ್ಮ ಅರ್ಹತೆ ಮತ್ತು ಸಾಮರ್ಥ್ಯದ ಆಧಾರದಲ್ಲಿ ಉನ್ನತ ಸ್ಥಾನಕ್ಕೆ ಏರಿದ್ದಾರೆ. ಸಂವಿಧಾನ ಜಾರಿಗೆ ಬಂದು 75 ವರ್ಷವಾದರೂ ಜಾತ್ಯಾತೀತತೆ ಹಾಗೂ ಅಸಮಾನತೆಯು ಕೋಮುವಾದಿಗಳ ಮನಸ್ಸಿನಲ್ಲಿ ಇನ್ನೂ ಬೇರು ಬಿಟ್ಟಿದೆ ಎನ್ನುವುದಕ್ಕೆ ಘಟನೆ ಸಾಕ್ಷಿಯಾಗಿದೆ ಎಂದರು.

ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆದು ದ್ವೇಷ ಮತ್ತು ಅಸಹಿಷ್ಣುತೆಯನ್ನು ಬೆಳೆಸುವ ವಿಕೃತ ಮನೋಭಾವಗಳು ದೇಶದಲ್ಲಿ ಹೆಚ್ಚುತ್ತಿವೆ. ಹೀನ ಕೃತ್ಯ ಎಸಗಿರುವ ರಾಕೇಶ್ ಕಿಶೋರ್ ನಂತರ ಮನುವಾದಿ ಮನೋಭಾವದವರು ಸಮಾಜದಲ್ಲಿ ಹುಟ್ಟಿಕೊಂಡು, ವಕೀಲನ ದುಷ್ಕೃತ್ಯವನ್ನು ಸಂಭ್ರಮಿಸುತ್ತಿರುವುದು ವಿಷಾದನೀಯ ಎಂದು ಹೇಳಿದರು.

ಸಿಐಟಿಯು ಪದಾಧಿಕಾರಿ ಸೌಮ್ಯ ಮಾತನಾಡಿ, ಸಂವಿಧಾನದ ಮೇಲಿನ ನಿರಂತರ ದಾಳಿಗಳನ್ನು ಹಿಮ್ಮೆಟ್ಟಿಸಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಉಳಿಸಬೇಕು. ನ್ಯಾಯಾಂಗವನ್ನು ಹಣದ ಪ್ರಭಾವದಿಂದ ಬಳಕೆ ಮಾಡುವವರ ವಿರುದ್ಧ ಜನರು ಎಚ್ಚರಿಕೆಯಿಂದ ಇರಬೇಕು ಎಂದರು.

## ವೈಡಿಡಿ ಕಾಲೇಜಿನಲ್ಲಿ ಸುಸಜ್ಜಿತ ಆಡಿಟೋರಿಯಂ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣ ಸಮೀಪದ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ತನ್ನದೇ ಆದ ಇತಿಹಾಸವಿದ್ದು, ಇಲ್ಲಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಳಾಂಗಣದಲ್ಲಿ ಆಡಿಟೋರಿಯಂ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.

ಪಟ್ಟಣ ಸಮೀಪದ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಡಿಟೋರಿಯಂ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ವಿದ್ಯಾರ್ಥಿಗಳ ಆಟ, ಪಾಠ ಸೇರಿ ಇನ್ನಿತರೆ ಚಟುವಟಿಕೆಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ರೂಜಾ ಯೋಜನೆಯಡಿ 15 ಲಕ್ಷ ರೂ. ಯೋಜನೆಯಡಿ ಆಡಿಟೋರಿಯಂ ನಿರ್ಮಿಸಲಾಗುತಿದ್ದು, ಮುಂದಿನ ಒಂದೂವರೆ ತಿಂಗಳೊಳಗೆ ಕಾಮಗಾರಿ ಮುಗಿಯಲಿದ್ದು, ನಂತರದಲ್ಲಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಅದರ ಸದೂಪಯೋಗ ಪಡಿಸಿಕೊಳ್ಳಬಹುದಾಗಿದೆ. ಅಲ್ಲದೆ ತಾಲ್ಲೂಕಿನ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ 4.20 ಕೋಟಿ ರೂ. ವೆಚ್ಚದಲ್ಲಿ ಇದೇ ಕಾಲೇಜು ಆವರಣದಲ್ಲೇ ಬೃಹತ್ತಾದ ಕಲಾ ಮಂದಿರ ನಿರ್ಮಾಣಕ್ಕೂ ಈಗಾಗಲೇ ಎಲ್ಲ ಸಿದ್ಧತೆ ನಡೆದಿದ್ದು ಕೆಲಸವೇ ದಿನಗಳಲ್ಲಿ ಅದಕ್ಕೂ ಭೂಮಿಪೂಜೆ ನೆರವೇರಿಸಲಾಗುವುದು. ಅದರೊಂದಿಗೆ ಕ್ಷೇತ್ರದ ಜನರಿಗೆ ಅಗತ್ಯವಾಗಿ ಬೇಕಿರುವ ಎಲ್ಲ ಸೌಲಭ್ಯಗಳು ದೊರಕುವಂತೆ ಮಾಡಲು ಸಂಬಮಧಿಸಿದ ಸಚಿವರು, ಅಧಿಕಾರಿಗಳೊಂದಿಗೆ ಈಗಾಗಲೇ ಚರ್ಚಿಸಿದ್ದು ಹಂತ ಹಂತವಾಗಿ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿಸಲಾಗುವುದು ಎಂದರು.

ಲೋಕೋಪಯೋಗಿ ಇಲಾಖೆ ಎಇಇ ಕೃಷ್ಣೇಗೌಡ ಮಾತನಾಡಿ, ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಸೇರಿ ಇತರೆ ಚಟುವಟಿಕೆ ಹಾಗೂ ಕಾರ್ಯಕ್ರಮಗಳಿಗೆ ಬಳಕೆಯಾಗುವಂತೆ ಆಡಿಟೋರಿಯಂ ನಿರ್ಮಿಸಲಾಗುತ್ತಿದೆ ಎಂದರು.

ವೈಡಿಡಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಮಹೇಶ, ಕಾಲೇಜು ಸಮಿತಿ ಸದಸ್ಯರಾದ ವೈ.ಎಸ್.ಸಿದ್ದೇಗೌಡ, ಹೆಬ್ಬಾಳು ಹಾಲಪ್ಪ, ಅಜಿತ್, ಉಪನ್ಯಾಸಕರಾದ ವೀರಭದ್ರಪ್ಪ, ಬಾಬು ಪ್ರಸಾದ್ ಇತರರಿದ್ದರು.

## ರಕ್ತದಾನದಿಂದ ಹಲವರ ಪ್ರಾಣ ಉಳಿಸಬಹುದು: ಸಿಮೆಂಟ್ ಮಂಜು




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ರಕ್ತದಾನ ಮಾಡುವ ಸಂದರ್ಭ ಕಾರಣಗಳೇನಿದ್ದರೂ ರಕ್ತದಾನ ಮಾಡುವುದರಿಂದ ಮೂವರ ಪ್ರಾಣ ಉಳಿಸಬಹುದು. ವಿಶ್ವದಲ್ಲೆ ಅತಿಹೆಚ್ಚು ರಕ್ತದ ಕೊರತೆಯಿಂದ ಬಳಲುತ್ತಿರುವವರು ಭಾರತದಲ್ಲಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿರುವ ಶಾಸಕರ ಕಚೇರಿ ಎದುರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 75ನೇ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸಮಯಕ್ಕೆ ಸರಿಯಾಗಿ ರಕ್ತ ಸಿಗದ ಕಾರಣ ಪ್ರತಿವರ್ಷ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಸಾವನ್ನಪ್ಪುತ್ತಿದ್ದಾರೆ. ಆ ಜೀವಗಳನ್ನು ಉಳಿಸಲು ರಕ್ತದಾನ ಪ್ರೋತ್ಸಾಹಿಸಬೇಕಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಎಷ್ಟೆ ಮುಂದುವರಿದರೂ, ರಕ್ತಕ್ಕೆ ಪರ್ಯಾಯವಿಲ್ಲ. ರಕ್ತವನ್ನು ಕೃತಕವಾಗಿ ತಯರಿಸಲು ಅಸಾಧ್ಯ. ಮನುಷ್ಯ ಮಾತ್ರ ಮತ್ತೊಬ್ಬ ಮನುಷ್ಯನಿಗೆ ರಕ್ತದಾನವನ್ನು ಮಾಡಿ ಜೀವ ಉಳಿಸಬಹುದು. ರಕ್ತದಾನ ಮಾಡುವುದರಿಂದ ಹೃದಯದ ಆರೋಗ್ಯ ಸುಧಾರಿಸುತ್ತದೆ. ನಿಯಮಿತ ರಕ್ತದಾನವು ದೇಹದಲ್ಲಿ ಕಬ್ಬಿಣದ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ರಕ್ತದ ಹರಿವನ್ನು ಹೆಚ್ಚಿಸುತ್ತದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಗಾಯಗೊಂಡವರಿಗೆ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಮತ್ತು ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಯಾವುದೇ ಪರಿಸ್ಥಿತಿಯಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. ಆದರೆ ಅನೇಕ ಜನರು ರಕ್ತದಾನ ಮಾಡುವುದರಿಂದ ದುರ್ಬಲರಾಗುತ್ತೇವೆ ಎಂದು ಭಾವಿಸುತ್ತಾರೆ. ಅದು ತಾತ್ಕಾಲಿಕ ಮಾತ್ರ. ವಾಸ್ತವವಾಗಿ ರಕ್ತದಾನ ಮಾಡುವುದರಿಂದ ದೇಹಕ್ಕೆ ವಿವಿಧ ರೀತಿಯ ಆರೋಗ್ಯ ಪ್ರಯೋಜನಗಳಿವೆ. ಹಣಕ್ಕಾಗಿ ರಕ್ತದಾನ ಮಾಡುವುದು ಶಿಕ್ಷಾರ್ಹ ಅಪರಾಧ. 18 ರಿಂದ 60 ವರ್ಷದೊಳಗಿನ ಯಾರೇ ಆದರೂ ಲಿಂಗಬೇಧವಿಲ್ಲದೆ ರಕ್ತದಾನ ಮಾಡಬಹುದು. ರಕ್ತದ ಉತ್ಪನ್ನಗಳನ್ನು ಪರವಾನಗಿ ಹೊಂದಿರುವ ರಕ್ತನಿಧಿ ಕೇಂದ್ರಗಳಿಂದ ಮಾತ್ರ ಪಡೆಯಬೇಕು ಎಂದರು.

ಸಮಾರಂಭದಲ್ಲಿ ರಕ್ತದಾನ ಮಾಡಿದವರಿಗೆ ಸಸಿಗಳು ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು. ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಮನೆ ಮುಂದೆ ನಿಲ್ಲಿಸಿದ್ದ ಕಾರು ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಮನೆ ಬೀಗ ತೆಗೆದು ಒಳಗಿಟ್ಟಿದ್ದ ಕೀ ನೆರವಿನಿಂದ ಕಾರು ಕಳವು ಮಾಡಿರುವ ಘಟನೆ ತಾಲ್ಲೂಕಿನ ಗೆಂಡೆಹಳ್ಳಿ ಗ್ರಾಮದಲ್ಲಿ ನಡೆದಿದೆ.

ಅಬ್ಬಲ್ ಪಾಷ ಅವರು ಅ. 5 ರಂದು ಮನೆಗೆ ಬೀಗ ಹಾಕಿ ಕೀಯನ್ನು ಎಂದಿನಂತೆ ಹೊರಗೆ ಬಿಟ್ಟಿದ್ದ ಶೂ ಒಳಗಿಟ್ಟು ಸಂಸಾರ ಸಮೇತ ಪ್ರವಾಸಕ್ಕೆ ತೆರಳಿದ್ದರು. ಅ. 7ರ ಬೆಳಿಗ್ಗೆ 4 ಗಂಟೆಗೆ ಮನೆಗೆ ಬಂದು ನೋಡಿದಾಗ ಕಾರು ಇಲ್ಲದಿರುವುದು ಗೊತ್ತಾಗಿದೆ. ಬಾಗಿಲ ಕೀ ತೆಗೆದು ಒಳಹೊಕ್ಕು ನೋಡಿದಾಗ ಕಾರು ಕೀ ನಾಪತ್ತೆಯಾಗಿರುವುದು ಗೊತ್ತಾಗಿದೆ. ಮನೆಯ ಬೀಗದ ಕೀ ಇಟ್ಟಿರುವುದನ್ನು ಗಮನಿಸಿದ್ದ ಕಳ್ಳರು ಕೃತ್ಯ ಉಪಾಯದಿಂದ ಕೃತ್ಯ ಎಸಗಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಳೆಯ ದ್ವೇಷದಿಂದ ವ್ಯಕ್ತಿ ಮೇಲೆ ಹಲ್ಲೆ

ಬೇಲೂರು: ಹಳೆಯ ದ್ವೇಷದಿಂದ ಅಪ್ಪ ಹಾಗೂ ಮಗ ಸೇರಿ ವ್ಯಕ್ತಿ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಅಂಗಡಿಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ. ಗಾಮದ ಲಕ್ಷ್ಮೀ ಎಂಬುವವರ ಅಳಿಯ ಅವಿನಾಶ್ ಗಾಯಾಳು. ಅ. 6ರ ರಾತ್ರಿ 11ರ ಸಮಯದಲ್ಲಿ ಮನೆಗೆ ಏಕಾಏಕಿ ನುಗ್ಗಿದ ಅದೇ ಗ್ರಾಮದ ಪಂಜು ಮತ್ತು ಅವರ ಮಗ ಸುರೇಂದ್ರ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ನುಗ್ಗಿದ ಅವರು ರಾಡ್‌ನಿಂದ ತಲೆಗೆ ಹೊಡೆದಿದ್ದಾರೆ. ಜಗಳ ಬಿಡಿಸಲು ಬಂದ ಅವಿನಾಶ್ ಅವರ ಹೆಂಡತಿಯನ್ನು ತಳ್ಳಿ ಗಾಯಗೊಳಿಸಿದ್ದಾರೆ. ಗಾಯಾಳು ವ್ಯಕ್ತಿಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ರ್ಯಾಕ್ಟರ್ ಹರಿದು ಮಹಿಳೆ ಸಾವು

ಅರಕಲಗೂಡು: ಕೆಎಸ್‌ಆರ್‌ಟಿಸಿ ಬಸ್‌ಗಾಗಿ ಕಾದು ರಸ್ತೆ ಪಕ್ಕ ನಿಂತಿದ್ದ ಮಹಿಳೆ ಮೇಲೆ ಟ್ರ್ಯಾಕ್ಟರ್ ಹರಿದು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಗಂಗೂರಿನಲ್ಲಿ ನಡೆದಿದೆ.

ಹಾಸನ ತಣ್ಣೀರುಹಳ್ಳ ನಿವಾಸಿ ರುಕ್ಮಿಣಿ ಮೃತರು. ಸಂಬಂಧಿಕರ ಮನೆಗೆ ತೆರಳಿದ್ದ ಅವರು ಹಾಸನಕ್ಕೆ ಬರಲು ಬಸ್‌ಗಾಗಿ ಕಾದು ನಿಂತಿದ್ದರು. ಈ ವೇಳೆ ಬೆಟ್ಟದಪುರ ಕಡೆಯಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಚಾಲಕ ಡಿಕ್ಕಿ ಮಾಡಿದ್ದಾನೆ.

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್-10

1846: ಇಥರ್ ಬಳಸಿ ಮೊದಲ ಶಸ್ತ್ರಚಿಕಿತ್ಸೆ ಅಮೇರಿಕಾದಲ್ಲಿ ನಡೆಯಿತು.

1911: ಚೀನಾದಲ್ಲಿ ಮ್ಯಹಾನ್ ಕ್ರಾಂತಿ ಪ್ರಾರಂಭವಾಗಿ ಚಿಂಗ್ ವಂಶದ ಅಂತ್ಯಕ್ಕೆ ದಾರಿ ಮಾಡಿತು.

1964: ಟೋಕಿಯೊ ಒಲಿಂಪಿಕ್ಸ್ ಆರಂಭ ಜಪಾನ್ ಮೊದಲ ಬಾರಿಗೆ ಆಯೋಜಿಸಿದ ಒಲಿಂಪಿಕ್ಸ್.

1970: ಫಿಜಿ ದೇಶ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದಿತು.

1980: ಕ್ಯಾನಡಾದಲ್ಲಿ ಕ್ಯಾನಡಾ ಚಾರ್ಟರ್ ಆಫ್ ರೈಟ್ಸ್ ಅಂಡ್ ಫ್ರೀಡಮ್ಸ್ ಪ್ರಸ್ತಾಪಿಸಲಾಯಿತು.

**ಜನನ**

1731: ಹೆನ್ರಿ ಕೇವಂಡಿಷ್ ಇಂಗ್ಲೀಷ್ ವಿಜ್ಞಾನಿ, ಹೈಡ್ರೋಜನ್ ಅನ್ವೇಷಕ

1901: ಅಲ್ಬರ್ಟ್ ಚೋಪ್ಪಿನ್ ನೊಬೆಲ್ ಪುರಸ್ಕೃತ ಅಮೇರಿಕನ್ ರಸಾಯನ ಶಾಸ್ತ್ರಜ್ಞ

1954: ಡೇವಿಡ್ ಲೀ ರೋತ್ ಅಮೇರಿಕನ್ ರಾಕ್ ಗಾಯಕ

1964: ಎಡ್ವರ್ಡ್ ಸೈಡನ್‌ಸ್ಟಿಕರ್ ಪ್ರಸಿದ್ಧ ಅಮೇರಿಕನ್ ಅನುವಾದಕ

1968: ವಿನೋದ್ ಕಾಂಬ್ಳಿ ಭಾರತದ ಕ್ರಿಕೆಟ್ ಆಟಗಾರ

**ಮರಣ**

1933: ರಿಂಗ್ ಲಾರ್ಡ್‌ನರ್ ಅಮೇರಿಕನ್ ಲೇಖಕ ಹಾಗೂ ಹಾಸ್ಯಪ್ರಿಯ ಕಥೆಗಾರ

1985: ಓರ್ಸನ್ ವೆಲ್ಸ್ ಪ್ರಸಿದ್ಧ ಅಮೇರಿಕನ್ ಚಲನಚಿತ್ರ ನಿರ್ದೇಶಕ

1985: ಯುಲ್ ಬ್ರಿನ್ನರ್ ಆದಿ ಕಿಂಗ್ ಅಂಡ್ ಐಟಿ ಚಿತ್ರಕ್ಕಾಗಿ ಖ್ಯಾತ ನಟ

## ಸಾಧಕರ ಪರಿಚಯಿಸುವ 'ಸುಂದರ ನವಿಲಿಗೆ ಚೆಂದದ ಗರಿ'

– ಗೊರೂರು ಅನಂತರಾಜು, ಹಾಸನ

ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದು ನಿವೃತ್ತಿ ಹೊಂದಿ ಪ್ರವೃತಿಯಲ್ಲಿ ಹವ್ಯಾಸಿ ಲೇಖಕಿಯಾಗಿ ಹಾಸನದ ಸಾಹಿತ್ಯ ಲೋಕದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಣಬರುತ್ತಿರುವ ಹೆಸರು ಸಾವಿತ್ರಮ್ಮ ಓಂಕಾರ್. ಶಿಶುಗೀತೆ, ಕಥೆ, ಕವನ, ಗಜಲ್, ವ್ಯಕ್ತಿ ಚಿತ್ರಗಳ ಬರವಣಿಗೆಯ ಜೊತೆಗೆ ರೇಖಾಚಿತ್ರಗಳ ರಚನೆಯಲ್ಲಿ ತೊಡಗಿಸಿಕೊಂಡವರು. ಪ್ರಸ್ತುತ ಇವರ ಸುಂದರ ನವಿಲಿಗೆ ಚೆಂದದ ಗರಿ ವ್ಯಕ್ತಿ ಚಿತ್ರಣಗಳ ಕೃತಿ. ಸಾಹಿತ್ಯ, ರಂಗಭೂಮಿ, ಜನಪದ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ, ಮಾಡುತ್ತಿರುವ, ಎಲೆಮರೆ ಕಾಯಿಗಳಂತೆ ಪ್ರಚಾರ ಪ್ರಸಿದ್ಧಿಗೆ ಹಾತೊರೆಯದ ಸಾಧಕರನ್ನು ಗುರುತಿಸಿ ಅವರ ಜೀವನ ಅನುಭವಗಳನ್ನು ನವಿಲಿನ ಚೆಂದದ ಗರಿಗಳಾಗಿ ತೆರೆದಿಟ್ಟಿದ್ದಾರೆ. ಮಾಜಿ ಜಿಲ್ಲಾ ಕ.ಸಾ.ಪ.ಅಧ್ಯಕ್ಷರು ಉದಯರವಿ ಬರೆದಂತೆ ತಮ್ಮ ಆತ್ಮರತಿಯೇ ಶ್ರೇಷ್ಠವೆಂದು ಭಾವಿಸುವ, ಭ್ರಮಿಸುವ ಇಂದಿನ ದಿನಮಾನಗಳಲ್ಲಿ ಬೇರೆಯವರ ಕುರಿತು ಬರೆಯುವ ಔದಾರ್ಯ ಒಬ್ಬ ಬರಹಗಾರನಿಗೆ ಇದ್ದರೆ ಅವರೊಳಗೆ ಮಾನವೀಯ ಮಿಡಿತ ಇರುತ್ತದೆ. ಸಾವಿತ್ರಮ್ಮ ಓಂಕಾರ್ ಅವರ ತಾಯ್ತನದ ಒಡಲೊಳಗೆ ಮನುಷ್ಯತ್ವದ ಮಿಡಿತವಿದೆ. ಸುಶೀಲ ಸೋಮಶೇಖರ್ ಬರೆಯುತ್ತಾರೆ ನಾನೊಬ್ಬ ಸುಖಿಸಿದರೇನುಂಟು ಜಗದಲಿ ಅನ್ಯರ ಸಖ್ಯದಲ್ಲೂ ಭಾಗಿಯಾಗಬೇಕು. ಸಾವಿತ್ರಮ್ಮ ಓಂಕಾರ್ ಅವರು ಆರಿಸಿಕೊಂಡಿರುವುದು ಕೇವಲ ಕಲ್ಪನಾ ವಿಲಾಸದ ಅಥವಾ ಮನೋರಂಜಕ ವಿಷಯಗಳನ್ನು ಅಲ್ಲ. ಸಾಹಿತ್ಯ, ಕಲೆ, ಸಂಶೋಧನೆ, ಸಮಾಜ ಸೇವೆ, ರಂಗಭೂಮಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರ ಸೃಜನಶೀಲ ಕ್ರಿಯಾ ವಿಶೇಷತೆಗಳ ಒಳನೋಟಗಳನ್ನು ತಮ್ಮ ಲೇಖನದಲ್ಲಿ ಪ್ರಾಮಾಣಿಕವಾಗಿ ಹಿಡಿದಿಟ್ಟಿದ್ದಾರೆ.

ಸುಂದರ ಕಂಗಳ ಚೆಲುವೆ
ನೋಡಿದೊಡನೆ ನಗು ಬೀರುವೆ
ದಂತ ಪಂಕ್ತಿಯೋ ದಾಳಿಂಬೆ ಹಣ್ಣು
ಕವನ ಬರೆಸುವ ಆತ್ಮೀಯತೆಯ ಹೆಣ್ಣು..

ವ್ಯಕ್ತಿ ಚಿತ್ರಗಳನ್ನು ನೀಡುವಾಗ ಸ್ವತಹ ಕವಿಯಾಗಿ ಕೆಲವೇ ಸಾಲುಗಳಲ್ಲಿ ವ್ಯಕ್ತಿತ್ವವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಮೇಡಂ ಅವರ ಮನದ ಮಾತು ಭಾವುಕತೆಯಲ್ಲಿ ಅಭಿವ್ಯಕ್ತಗೊಂಡಿದೆ.




ಪ್ರಭುಂ ಪ್ರಾಣನಾಥಂ ವಿಭುಂ ವಿಶ್ವನಾಥಂ
ಜಗನ್ನಾಥ ನಾಥಂ ಸದಾನಂದ ಭಾಜಮ್
ಭವದ್ಭವ್ಯಭೂತೇಶ್ವರಂ ಭೂತನಾತಮ್
ಶಿವಂ ಶಂಕರವಮ್ ಶಂಭು ಮೇಶಾನಮೆಡೆ...

ಶಿವನ ಆರಾಧನೆಯಲ್ಲಿ ಜೀವನ ಜೀವವನ್ನು ಗಂಧದಂತೆ ತೇಯ್ದ ಶಿವಾಲಯದಲ್ಲಿ ಸತತ 45 ವರ್ಷ ಸೇವೆಗೈದ ತಮ್ಮ ತಂದೆ ವೆ.ಗುರುನಂಜಯ್ಯ ಮತ್ತು ತಾಯಿ ಗಂಗಮ್ಮ ಇವರ ಜೀವನವನ್ನು ಕಣ್ಣಾರೆ ಕಂಡ ತಮಗೆ ಹತ್ತು ಹಲವು ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ ಎನ್ನುತ್ತಾರೆ. ಪ್ರತಿದಿನ ರುದ್ರಾಭಿಷೇಕ, ಅಷ್ಟೋತ್ತರ ನೋಡಿ ಬೆಳೆದಿದ್ದಾಗಿ ಹೇಳಿದ್ದಾರೆ. ಬಹುಶ: ಈ ದಿಶೆಯಲ್ಲಿ ಇವರ ಹೆಸರಿನ ಮುಂದೆ ಓಂಕಾರ್ ಇರಬಹುದೇನೋ ಎನಿಸುತ್ತದೆ. ಮೇಡಂ ಎಷ್ಟು ಭಾವುಕರಾಗಿ ಮಾಲೆ ರೀತಿ ಲೇಖನ ಸಿದ್ಧಪಡಿಸಿ ಭಕ್ತಿಯಿಂದ ದೇವರಿಗೆ ಅರ್ಪಿಸಿದ್ದಾಗಿ ಹೇಳುತ್ತಾರೆಂದರೆ ಭಗವಾನ್ ಸ್ವರೂಪಿ ಸಾಹಿತ್ಯಕ್ಕೆ ಬಗೆಬಗೆಯ ಸಾಧಕರೆಂಬ ಪತ್ರೆ ಪುಷ್ಪಗಳಿಂದ ಮಾಲೆಯನ್ನು ಮಾಡಿ ಓಂ ಶಿವಾಯ ನಮ: ಎಂದಾಗ ಸೋಮನಾಥ ಎನ್ನುವ ಬಿಲ್ವಪತ್ರೆ, ಓಂ ಕೃಷ್ಣಾಯನಮ: ಎಂದಾಗ ಗೋವಿಂದಭಟ್ ಎನ್ನುವ ಪಾರಿಜಾತ, ಓಂ ಮಹಾಲಕ್ಷ್ಮಿಯೇ ನಮ: ಎಂದಾಗ ಪದ್ಮಮೂರ್ತಿ ಎನ್ನುವ ಗುಲಾಬಿಯನ್ನು, ಓಂ ಅನ್ನಪೂರ್ಣೇಶ್ವರಿಯೇ ನಮ: ಎಂದಾಗ ಕಾತ್ಯಾಯಿನಿ ಹಿರೇಮಠ ಎನ್ನುವ ಮಲ್ಲಿಗೆ, ಓಂ ಪಾರ್ವತಿಯೇ ನಮ: ಎಂದಾಗ ಮಾಲಾ ಚೆಲುವನಹಳ್ಳಿ ಎನ್ನುವ ಸೇವಂತಿಗೆಯ ಅರ್ಪಿಸಿ ಸಹಸ್ರಾರು ದೇವಾನುದೇವತೆಗಳಿಗೆ ಇಲ್ಲಿರುವ ಸುಂದರ ನವಿಲುಗಳ ಹೆಸರಲ್ಲಿ ಅರ್ಪಿಸಿರುವೆ ಎಂದು ಹೆಮ್ಮೆಪಡುತ್ತಾರೆ. ಕೃತಿಯಲ್ಲಿ 74 ಚೆಂದದ ನವಿಲುಗರಿಗಳು ಮೇಡಂ ಲೇಖನಿಯಲ್ಲಿ ಗರಿಬಿಚ್ಚಿ ನಲಿದಿವೆ.

ಐದು ಕೃತಿಗಳನ್ನು ಪ್ರಕಟಿಸಿರುವ ಅರಸೀಕೆರೆ ಪದ್ಮಮೂರ್ತಿ, ಮೂರು ಕಥಾ ಸಂಕಲನ ಪ್ರಕಟಿಸಿರುವ ಡಾ.ಕೋಳ್ಚಪ್ಪೆ ಗೋವಿಂದಭಟ್, ಕೃಷಿ ಚಟುವಟಿಕೆಯೊಂದಿಗೆ ಕಾವ್ಯ ಕೃಷಿಯಲ್ಲಿ ಮೂರು ಕವನ ಸಂಕಲನ ಪ್ರಕಟಿಸಿರುವ ಮಾಲಾ ಚೆಲುವನಹಳ್ಳಿ ಇವರುಗಳದು ಸಾಹಿತ್ಯ ಕೃಷಿಯಾದರೆ ಅರಸೀಕೆರೆ ತಾ. ಮುರುಂಡಿ ಸರ್ಕಾರಿ ಪ್ರೌಢಶಾಲೆಯ ಆಂಗ್ಲ ಭಾಷಾ ಶಿಕ್ಷಕಿ ಕಾತ್ಯಾಯಿನಿ ತೆವರಿಮಠ್ ಚಿತ್ರಕಲೆಯಲ್ಲಿ ಹೈಯರ್ ಗ್ರೇಡ್ ಪಾಸ್, ಕವಿ ಕೊಟ್ರೇಶ್ ಉಪ್ಪಾರ್ ಹಿಂದಿ ಶಿಕ್ಷಕರು ಕನ್ನಡಕ್ಕೆ 70 ಕೃತಿ ಕೊಟ್ಟವರು. ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾಮೇಶ್ವರಿಭಟ್ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪಡೆದ ಇವರ ಪರಿಚಯ ಮಾಡಿದ್ದಾರೆ. ವಿದ್ಯುತ್ ಇಲಾಖೆಯ ಉದ್ಯೋಗಿ ಚಂದ್ರು ಬಾಣಾವರ ಹವ್ಯಾಸಿ ಬರಹಗಾರ, ಸ್ಥಳೀಯ ಇತಿಹಾಸದ ಬಗ್ಗೆ ಸಂಶೋಧನೆ ನಡೆಸಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುತ್ತಿರುವ ಡಾ.ಹರೀಶ್ ಕುಮಾರ್ ಡಾಕ್ಟರೇಟ್ ಪಡೆದವರು. ಅರಸೀಕೆರೆ ರಾಯಲ್ ಪದವಿ ಕಾಲೇಜು ಪ್ರಾಂಶುಪಾಲರು ಕೆ.ಎಸ್.ಮಂಜುನಾಥ್ ಕನ್ನಡ ಸಾಹಿತ್ಯ ಕ್ಷೇತ್ರದ ಸಂಘಟನೆಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರು. ಹಾಸ್ಯ ಬರಹ ಬರೆಯುತ್ತಿರುವ ಅರಸೀಕರೆ ಬಿ.ಪರಮೇಶ್ ಉತ್ತಮ ನಿರೂಪಕರು. ಜನಮೆಚ್ಚಿದ ಶಿಕ್ಷಕಿ ಪ್ರಶಸ್ತಿ ಪಡೆದ ಶಫೀತಾ ಬೇಗಂ ಸ್ಕೌಟ್ ಅಂಡ್ ಗೈಡ್ಸ್‌ನಲ್ಲಿ 150 ಮಕ್ಕಳಿಗೆ ರಾಜ್ಯ ಪುರಸ್ಕಾರ 5 ಮಕ್ಕಳಿಗೆ ರಾಷ್ಟ್ರಪತಿ ಪದಕ ಪಡೆಯಲು ತರಬೇತಿ ನೀಡಿದವರು. ಸಾವಿತ್ರಮ್ಮ ಓಂಕಾರ್ ಅವರು ಸ್ವತ: ಶಿಕ್ಷಕಿ ಲೇಖಕಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ವೃಂದ ಸೇವೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಪ್ರಚಲಿತ ದಿನಗಳಲ್ಲಿ ದಿನಪತ್ರಿಕೆಗಳಲ್ಲಿ ಒಂದಲ್ಲ ಒಂದು ಕವನಗಳನ್ನು ಪ್ರಕಟಿಸುತ್ತಿರುವ ಮಧುಮಾಲತಿ ಬೇಲೂರು, ಬೋರೇಗೌಡ ಎ.ಹೆಚ್. ಹಾಗೂ ಹೆಚ್.ಎಸ್.ಪ್ರತಿಮಾ ಹಾಸನ್ ಅವರ ಕವಿ ಕಾವ್ಯ ಕಿರುಪರಿಚಯ ಮಾಡಿದ್ದಾರೆ. ನನ್ನ (ಗೊರೂರು ಅನಂತರಾಜು) ಕಿರು ಸಾಹಿತ್ಯ ಪರಿಚಯವನ್ನು ಕೂಡ ಮೇಡಂ ಮಾಡಿದ್ದಾರೆ. ನನ್ನ ಹಲವಾರು ಪುಸ್ತಕಗಳನ್ನು ಓದಿ ಪತ್ರಿಕೆಗಳಿಗೆ ವಿಮರ್ಶೆ ಬರೆದಿದ್ದಾರೆ. ಒಟ್ಟಾರೆ ಈ ಕೃತಿಯಲ್ಲಿನ 74 ವಿವಿಧ ಕ್ಷೇತ್ರದ ಸಾಧಕರ ಪರಿಚಯ ಮಾಲಿಕೆ ಈಗಾಗಲೇ ದಿನಪತ್ರಿಕೆಯಲ್ಲಿ ಸುಂದರ ನವಿಲಿಗೆ ಚೆಂದದ ಗರಿ ಶೀರ್ಷಿಕೆಯಡಿ ಬರೆದಿದ್ದು ಅದನ್ನೆಲ್ಲಾ ಕ್ರೂಢೀಕರಿಸಿ ಸರಿಸುಮಾರು 300 ಪುಟಗಳ ಪುಸ್ತಕವನ್ನಾಗಿಸಿ ಇದೇ ತಿಂಗಳು (ಅಕ್ಟೋಬರ್) ಶನಿವಾರ 11ನೇ ತಾರೀಖು ಅರಸೀಕೆರೆಯಲ್ಲಿ ಕೃತಿಯನ್ನು ಲೋಕಾರ್ಪಣೆ ಮಾಡುತ್ತಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248